ಓ:ಎಸ್:ನಂ.168/2023

ಪಿ.ಡಬ್ಲ್ಯೂ- 1

**ದಿನಾಂಕ: 04-06-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲು:** ಪ್ರತಿವಾದಿ ಪರ ಶ್ರೀ ಟಿ ಎನ್ ಎಂ **ವಕೀಲರಿಂದ**

ಪ್ರತಿವಾದಿಗಳು ನಮ್ಮ ಊರಿನವರಾಗಿದ್ದು, ನಾನು ಹುಟ್ಟಿದಾಗಿನಿಂದಲೂ ಪರಿಚಯ ಇರುತ್ತಾರೆ. ದಾವ ಸ್ವತ್ತು ಪೂರ್ವದಲ್ಲಿ ನನ್ನ ತಾತನಾದ ಮುರುಗಯ್ಯನವರು ಖರೀದಿ ಮಾಡಿರುತ್ತಾರೆ ಅವರ ಹೆಸರಿಗೆ ಖಾತೆ ಬಂದಿರುತ್ತದೆ. ಸದರಿಯವರು ಯಾವ ಇಸವಿಯಲ್ಲಿ ಖರೀದಿ ಮಾಡಿರುತ್ತಾರೆಂದು ನನಗೆ ಗೊತ್ತಿಲ್ಲ. ಮುರುಗಯ್ಯನವರು ತೀರಿಕೊಂಡ ನಂತರ ದಾವ ಸ್ವತ್ತು ಅಡವೇಶಯ್ಯನವರಾದ ನನ್ನ ತಂದೆ ಹೆಸರಿಗೆ ಖಾತೆ ಬಂದಿರುತ್ತದೆ. ಮುರುಗಯ್ಯನವರು ಖರೀದಿ ಮಾಡಿದ ಸಂದರ್ಭದಲ್ಲಿ ಸರ್ವೆ ಮಾಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ಹೆಸರಿಗೆ ಖಾತೆ ಬದಲಾವಣೆ ಆದ ಇಸವಿ ನನಗೆ ನೆನಪಿಲ್ಲ. ನನ್ನ ತಾತನಿಂದ ನನ್ನ ತಂದೆಗೆ ಖಾತೆ ಬದಲಾವಣೆ ಆದ ಸಮಯದಲ್ಲಿ ಸರ್ವೆ ಆದ ಬಗ್ಗೆ ನನಗೆ ಗೊತ್ತಿಲ್ಲ. ನನ್ನ ತಂದೆ ತೀರಿ ಹೋದ ನಂತರ ನನ್ನ ತಾಯಿಯಾದ ಸರೋಜಮ್ಮನವರ ಹೆಸರಿಗೆ ಖಾತೆ ಬಂದಿರುತ್ತದೆ.

ನನ್ನ ತಂದೆ 1991 ನೇ ಇಸವಿಯಲ್ಲಿ ತೀರಿಕೊಂಡಿರುತ್ತಾರೆ. ನಂತರ ವರ್ಷದಲ್ಲಿ ನನ್ನ ತಾಯಿಯ ಹೆಸರಿಗೆ ಖಾತೆ ಬದಲಾವಣೆ ಆಗಿರುತ್ತದೆ. ಆ ಸಂದರ್ಭದಲ್ಲಿ ಸರ್ವೆ ಆಗಿರುವ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ. ನನ್ನ ತಾಯಿ ತೀರಿಕೊಂಡ ನಂತರ 2011 ನೇ ವರ್ಷದಲ್ಲಿ ನನ್ನ ಹೆಸರಿಗೆ ದಾವಸ್ವತ್ತು ಖಾತೆ ಬದಲಾವಣೆ ಆಗಿರುತ್ತದೆ. ಆ ಸಂದರ್ಭದಲ್ಲಿ ನಾನು ಯಾವುದೇ ಸರ್ವೆ ಮಾಡಿಸಿರುವುದದಿಲ್ಲ. ನನ್ನ ತಾತ ಮುರುಗಯ್ಯನವರು ದಾವ ಸ್ವತ್ತನ್ನು ಕೊಂಡುಕೊಂಡು ಯಾವ ರೀತಿ ಸ್ವಾಧೀನದಲ್ಲಿದರೂ ಅದೇ ರೀತಿ ನನ್ನ ತಂದೆ ಸ್ವಾಧೀನದಲ್ಲಿದ್ದರು ಅದೇ ರೀತಿ ನಾನು ಸಹ ಸ್ವಾಧೀನದಲ್ಲಿರುತ್ತೇನೆ. ದಾವ ಸ್ವತ್ತಿನಲ್ಲಿ ಅಡಿಕೆ ಗಿಡಗಳು ಇದ್ದು, ಅದು ಯಾವ ವರ್ಷದಲ್ಲಿ ನೆಟ್ಟಿರುತ್ತಾರೆಂದು ನನಗೆ ಗೊತ್ತಿಲ್ಲ. ಅಡಿಕೆ ಗಿಡಗಳ ವಯಸ್ಸು ನನಗೆ ಗೊತ್ತಿಲ್ಲ. ನಮ್ಮ ಜಮೀನಿನ ಪಶ್ಚಿಮ ಭಾಗಕ್ಕೆ

ಪ್ರತಿವಾದಿಯರ ಜಮೀನು ಬರುತ್ತದೆ. ಪ್ರತಿವಾದಿಗಳು ಅವರ ಜಮೀನನ್ನು ನಮ್ಮ ಚಿಕ್ಕಪ್ಪನಿಂದ ನೋಂದಾಯಿತ ಕ್ರಯಪತ್ರದ ಮುಖಾಂತರ ಖರೀದಿ ಮಾಡಿರುತ್ತಾರೆ. ನಮ್ಮ ದಾವ ಸ್ವತ್ತು 23 ಗುಂಟೆ ಇದ್ದು, ಅದರಲ್ಲಿ 1 ಗುಂಟೆ ಖರಾಬು ಇದ್ದು 22 ಗುಂಟೆ ಇರುತ್ತದೆ, ಹಾಗೆ ನಮ್ಮ ಚಿಕ್ಕಪ್ಪನವರಿಗೆ 22 ಗುಂಟೆ ಇತ್ತು. ಪ್ರತಿವಾದಿಗಳು ನಮ್ಮ ಚಿಕ್ಕಪ್ಪನವರಿಂದ 22 ಗುಂಟೆಯನ್ನು ಖರೀದಿ ಮಾಡಿರುತ್ತಾರೆ. ಪ್ರತಿವಾದಿಗಳು ನಿಮ್ಮ ಚಿಕ್ಕಪ್ಪನವರಿಂದ ಜಮೀನನ್ನು ಖರೀದಿ ಮಾಡಿ 30 ವರ್ಷಗಳಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ಖರೀದಿ ಮಾಡಿದ ಸಮಯದಲ್ಲಿ ಆ ಜಮೀನು ಖಾಲಿ ಜಾಗ ಆಗಿತ್ತು ಎಂದರೆ ಸರಿ. ಪ್ರತಿವಾದಿಗಳು ಅವರ ಜಮೀನಿನಲ್ಲಿ ಅಡಿಕೆ ಸಸಿಗಳನ್ನು ಹಾಕಿ 15 ವರ್ಷಗಳಾಗಿರುತ್ತದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳ ಜಮೀನಿನಲ್ಲಿ ಅಡಿಕೆ ಸಸಿ ಇರುವುದನ್ನು ನಾನು ನೋಡಿರುತ್ತೇನೆ. ನಿಮ್ಮ ಜಮೀನಿನ 2-3 ಅಡಿ ಕೆಳಗೆ ಪ್ರತಿವಾದಿಗಳ ಜಮೀನು ಬರುತ್ತದೆ ಎಂದರೆ ಸಾಕ್ಷಿ ಸಮನಾಗಿರುತ್ತದೆ ಎಂದು ನುಡಿದಿರುತ್ತಾರೆ.

ಪ್ರತಿವಾದಿಗಳು ಅವರು ಜಮೀನು ಖರೀದಿ ಮಾಡುವ ಸಮಯದಲ್ಲಿ 3 ಕಡೆ ಬೇಲಿ ಹಾಕಿದ್ದು, ನಮ್ಮ ಜಮೀನು ಹೊಂದಿಕೊಂಡಿರುವ ಜಾಗದಲ್ಲಿ ಬೇಲಿ ಹಾಕಿರುವುದಿಲ್ಲ. 1985-86 ನೇ ಇಸವಿಯಲ್ಲಿ ನಿಮ್ಮ ತಂದೆ ಹಾಗೂ ನಿಮ್ಮ ಚಿಕ್ಕಪ್ಪನಿಗೆ ಅವರಿಗೆ ಬಂದ ಆಸ್ತಿಗಳು ಅವರ ಹೆಸರಿಗೆ ಖಾತೆ ಆಗಿರುತ್ತದೆ ಎಂದರೆ ಸಾಕ್ಷಿ ಇಸವಿ ನನಗೆ ನೆನಪಿರುವುದಿಲ್ಲ ಎಂದು ನುಡಿದಿರುತ್ತಾರೆ. 1997 ನೇ ಇಸವಿಯಲ್ಲಿ ಪ್ರತಿವಾದಿಗಳು ನಿಮ್ಮ ಚಿಕ್ಕಪ್ಪನಿಂದ 22 ಗುಂಟೆ ಜಮೀನನ್ನು ಖರೀದಿ ಮಾಡಿರುತ್ತಾರೆ, ಸದರಿ ವಿಚಾರ ನಿಮಗೆ ತಿಳಿದಿರುತ್ತದೆ ಎಂದರೆ ಸಾಕ್ಷಿ ಇಸವಿ ನನಗೆ ನೆನಪಿರುವುದಿಲ್ಲ ಎಂದು ನುಡಿದಿರುತ್ತಾರೆ. ಪ್ರತಿವಾದಿಗಳು ನಿಮ್ಮ ಚಿಕ್ಕಪ್ಪನಿಂದ ಖರೀದಿ ಮಾಡಿರುವ ಅಷ್ಟೇ ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು

ನುಡಿದಿದ್ದು, ಹೆಚ್ಚು ಜಮೀನಿನಲ್ಲಿ ಸ್ವಾಧೀನದಲ್ಲಿರುತ್ತಾರೆಂದು ನುಡಿದಿರುತ್ತಾರೆ. ನಿಮ್ಮ ಜಮೀನಿನಲ್ಲಿ 30 ವರ್ಷಗಳ ಅಡಿಕೆ ಗಿಡಗಳು ಇದ್ದು, ಪ್ರತಿವಾದಿಗಳ ಜಮೀನಿನಲ್ಲಿ 15 ವರ್ಷದ ಅಡಿಕೆ ಗಿಡಗಳು ಇರುತ್ತವೆ ಎಂದರೆ ಸಾಕ್ಷಿ ನನಗೆ ಅಡಿಕೆ ಗಿಡಗಳ ವಯಸ್ಸು ತಿಳಿದಿರುವುದಿಲ್ಲ ಎಂದು ನುಡಿದಿರುತ್ತಾರೆ. ದಾವ ಸ್ವತ್ತು ನನ್ನ ಹೆಸರಿಗೆ ಖಾತೆ ಬಂದ ನಂತರ 2022 ನೇ ವರ್ಷದಲ್ಲಿ ನಾನು ಸರ್ವೆ ಮಾಡಿಸಿರುತ್ತೇನೆ. ನಿಮ್ಮ ಹೆಸರಿಗೆ ಖಾತೆ ಬಂದ 10-12 ವರ್ಷಗಳ ನಂತರ ಸರ್ವೆ ಮಾಡಲು ಅರ್ಜಿ ಸಲ್ಲಿಸಿರುತ್ತಿರಾ ಎಂದರೆ ಸಾಕ್ಷಿ ಹೌದು ಎಂದು ನುಡಿದಿರುತ್ತಾರೆ.  ನಿಮ್ಮ ತಾಯಿಯಿಂದ ನಿಮ್ಮ ಹೆಸರಿಗೆ ಬಂದ ಜಮೀನಿನಲ್ಲಿ ನೀವು ಸ್ವಾಧೀನದಲ್ಲಿದ್ದು, ಪ್ರತಿವಾದಿಗಳಿಗೆ ಅವರು ಖರೀದಿ ಮಾಡಿದ ಜಮೀನಿನಲ್ಲಿ ಅವರು ಸ್ವಾಧೀನದಲ್ಲಿದ್ದರು ಎಂದರೆ ಸರಿ.

ಪ್ರತಿವಾದಿಗಳು ದಾವ ಸ್ವತ್ತನ್ನು ಅಳತೆ ಮಾಡುವ ಸಮಯದಲ್ಲಿ  ಹಾಜರಿರಲಿಲ್ಲ ಹದ್ದುಬಸ್ತು ಮಾಡುವ ಸಮಯದಲ್ಲಿ ಹಾಜರಿದ್ದರು. ಸರ್ವೆ ಮಾಡಿದ ಸಮಯದಲ್ಲಿ 2 ವರೆ ಗುಂಟೆ ನಮ್ಮ ಜಮೀನಿನಲ್ಲಿ ಪ್ರತಿವಾದಿಗಳು ಒತ್ತುವರಿ ಮಾಡಿಕೊಂಡಿರುವ ಬಗ್ಗ ನಮಗೆ ತಿಳಿದುಬಂದಿರುತ್ತದೆ. ಅಳತೆ ಮಾಡಿಸಿದ ನಂತರ ನನಗೆ ತಿಳಿದುಬಂದಿರುತ್ತದೆ. ಯಾವುದೇ ಸರ್ವೆ ಕಾರ್ಯವನ್ನು ನೀವು ಮಾಡಿಸಿರುವುದಿಲ್ಲ, ಯಾವುದೇ ಅಧಿಕಾರಿಗಳು ಬಂದುದಾವ ಸ್ವತ್ತನ್ನು ಸರ್ವೆ ಮಾಡಿರುವುದಿಲ್ಲ, ಕಛೇರಿಯಲ್ಲಿ ಸರ್ವೆ ದಾಖಲಾತಿಗಳನ್ನು ಸೃಷ್ಠಿ ಮಾಡಿಸಿರುತ್ತಿರಾ ಎಂದರೆ ಸರಿಯಲ್ಲ. ಪ್ರತಿವಾದಿಗಳು ನಿಮಗೆ ಸಂಬಂಧಪಟ್ಟ ಯಾವುದೇ ಜಮೀನನ್ನು ಒತ್ತುವರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನೀವು ಅಕ್ರಮ ಲಾಭ ಪಡೆಯಲು ಪ್ರತಿವಾದಿಗಳ ಮೇಲೆ ಸುಳ್ಳು ದಾವೆ ಹೂಡಿರುತ್ತಿರಾ ಎಂದರೆ ಸರಿಯಲ್ಲ. ಪ್ರತಿವಾದಿಗಳು ಅವರ ಜಮೀನನ್ನು ಖರೀದಿ ಮಾಡಿದ ಸಮಯದಿಂದಲೂ ಅಷ್ಟೇ ಜಾಗದಲ್ಲಿ ಸ್ವಾಧೀನದಲ್ಲಿರುತ್ತಾರೆಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ. ನಿಮಗೆ ಎಲ್ಲಾ ವಿಚಾರ

ತಿಳಿದಿದ್ದರೂ ಸಹ ನ್ಯಾಯಾಲಯದ ಮುಂದೆ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದಿರಾ ಎಂದರೆ ಸರಿಯಲ್ಲ.

ಮರು ವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

**ಓ. ಕೇ. ಸ. ಇ. ಎ. ಒ.**

ಸಹಿ/-

1 ನೇ **ಹೆಚ್ಚುವರಿ** ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**